ಅಧ್ಯಕ್ಷರು:- ವಸತಿ ಮಂತ್ರಿಗಳು ಇಲ್ಲವೋ?

ಶ್ರೀ ಸಿ. ಭೈರೇಗೌಡ:- ಮಾನ್ಯ ಅಧ್ಯಕ್ಷರೇ, ಇದಕ್ಕೆ ಉತ್ತರವನ್ನು ಒದಗಿಸುವ ವ್ಯವಸ್ಥೆ ಮಾಡುತ್ತೇವೆ.

ಅಧ್ಯಕ್ಷರು:- ಅಲ್ಲಾ ಭೈರೇಗೌಡರೇ, ತಾವು ಬೇಸರ ಮಾಡಿಕೊಳ್ಳಬೇಡಿ. ಉತ್ತರ ನೀವು ಹೇಳುವುದು, ನಾನು ಮುಂದಕ್ಕೆ ಹೋಗುವುದು ಅದು ಬೇರೆ ವಿಷಯ. ಈ ರೀತಿಯ ಪ್ರವೃತ್ತಿ ಬಳ್ಳಿಯದಲ್ಲ. This is very bad ಅವರಿಗಿನ್ನೂ ಚಿಕ್ಕ ವಯಸ್ಸು, ಇಷ್ಟು ಹೊತ್ತು ಇಲ್ಲಿದ್ದರು, ಇರಬೇಕು, ಅಜೆಂಡಾದಲ್ಲಿ ಬಿಸಿನೆಸ್ ಲಿಸ್ಟ್ ಔಟ್ ಮಾಡಿದ್ದಾರೆ. He is responsible to answer the House ನೀವು ಉತ್ತರ ಕಳುಹಿಸಿಕೊಡಿ.

ಶ್ರೀ ಸಿ. ಭೈರೇಗೌಡ:- ಕ್ಷಮಿಸಬೇಕು, ತಾವು ಹೇಳುವಂಥ ಅಭಿಪ್ರಾಯಕ್ಕೆ ನನ್ನು ಸಂಪೂರ್ಣವಾದಂಥ ಸಹಮತ ಇದೆ.

ಬೆಂಗಳೂರು ನಗರದಲ್ಲಿ ಅಪಾರ್ಟಮೆಂಟ್ಸ್‌ಗಳಿಗೆ ಹೋಟೆಲ್‌ಗಳಿಗೆ, ಸಿನಿಮಾ ಮಂದಿರಗಳಿಗೆ, ಸರ್ಕಸ್ ಕಂಪನಿಗಳಿಗೆ ಪೆಟ್ರೋಲ್ ಬಂಕುಗಳಿಗೆ ಹಾಗೂ ಸೀಮೆ ಎಣ್ಣೆಅಂಗಡಿಗಳಿಗೆ ಪರವಾನಗಿ ನೀಡುವುದರ ಬಗ್ಗೆ.

ಶ್ರೀ ರಾಮಲಿಂಗೇಗೌಡ:- ಬೆಂಗಳೂರು ನಗರದಲ್ಲಿ ಅಪಾರ್ಟಮೆಂಟ್ಸ್‌ಗಳಿಗೆ, ಹೋಟೆಲ್, ಸಿನಿಮಾ ಮಂದಿರಗಳು, ಸರ್ಕಸ್ ಕಂಪನಿಗಳು, ಪೆಟ್ರೋಲ್ ಬಂಕ್ ಹಾಗೂ ಸೀಮೆಎಣ್ಣೆ ಅಂಗಡಿಗಳಿಗೆ ಅಗ್ನಿ ಶಾಮಕ ದಳದವರು ಪರವಾನಗಿಯನ್ನು ನೀಡುತ್ತಿದ್ದು, ಇದರಲ್ಲಿ ಬಹಳ ಅವ್ಯವಹಾರಗಳು ಆಗುತ್ತಿರುವುದು ತಿಳಿದು ಬಂದಿದೆ. ಪರವಾನಗಿಯನ್ನು ನೀಡಲು ಸಾಧ್ಯವಾಗದೇ, ಇರತಕ್ಕಂಥ ಸಂದರ್ಭಗಳಲ್ಲಿ ಪರವಾನಗಿಯನ್ನು ನೀಡುತ್ತಿರುವುದು ಕಂಡುಬಂದಿದೆ. ಡಿವಿಷನಲ್ ಫೈಲ್ ಆಫೀಸರ್ ರವರ ವರದಿ ಮೇಲೆ ಈ ಪರವಾನಗಿಯನ್ನು ನೀಡುತ್ತಿದ್ದು, ಇದನ್ನು ತಪ್ಪಿಸಿ, ಸರ್ಕಾರದ ಗೃಹ ಕಾರ್ಯದರ್ಶಿಗಳ ಮಟ್ಟದಲ್ಲಿ ಸಂಬಂಧಪಟ್ಟ ಅಧಿಕಾರಿಗಳ ವರದಿ ಆಧಾರದ ಮೇಲೆ ಪರವಾನಗಿಯನ್ನು ನೀಡುವ ಪದ್ಧತಿಯನ್ನು ಜಾರಿಗೆ ತರಬೇಕೆಂದು ಕೋರುತ್ತೇನೆ.

ಶ್ರೀ ಖಿರಾಜುದ್ದೀನ್ ನಿಜಾಮುದ್ದೀನ್ ಪಾಟೀಲ್:- (ಅಗ್ನಿ, ಶಾಮಕ ದಳ, ಸೈನಿಕ ಕಲ್ಯಾಣ ಹಾಗೂ ಬಂಧೀಖಾನೆ ಸಚಿವರು), ಸನ್ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಸದಸ್ಯರು ಕೇಳಿದಂಥ ಪ್ರಶ್ನೆಗೆ ಉತ್ತರ ರೂಲ್ಸ ಅಂಡ್ ರೆಗ್ಯೂಲೇಷನ್ಸ ಫಾಲೋ ಮಾಡುವಾಗ ಎಲ್ಲೆಲ್ಲಿ ತಪ್ಪು ಎಸಗಿ ಪರ್ಮಿಶನ್ ಕೊಟ್ಟಂಥವುಗಳಿವೆ, ಅವುಗಳನ್ನು ನಮಗೆ ತಿಳಿಸಿದರೆ ಅವರ ಬಗ್ಗೆ ನಾವು ಪರಿಶೀಲನೆ ಮಾಡಿ ಕ್ರಮ ತೆಗೆದುಕೊಳ್ಳುತ್ತೇವೆಂದು ನಾವು ಅವರಿಗೆ ಭರವಸೆಯನ್ನು ಕೊಡುತ್ತೇವೆ.

ಮಂಗಳೂರಿನ ನಗರ ಪಾಲಿಕೆಗೆ ಕುಡಿಯುವ ನೀರಿನ ವ್ಯವಸ್ಥೆ.

ಅಧ್ಯಕ್ಷರು:- ಶ್ರೀ ಯೋಗೀಶ್ ಭಟ್,

ಶ್ರೀ ಎನ್.ಯೋಗೀಶ್ ಭಟ್.:- ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ನಗರಾಭಿವೃದ್ಧಿ ಹಾಗೂ ವಸತಿ ಸಚಿವರ ಗಮನ ಸೆಳೆಯುವುದು ಏನೆಂದರೆ, ತಾವು ಕಳೆದ ಅಧಿವೇಶನದಲ್ಲಿ ಚುಕ್ಕೆ ಗುರ್ತಿನ ಪ್ರಶ್ನೆಗೆ ಉತ್ತರಿಸಿದಾಗ ಕೊಟ್ಟ ಆಶ್ವಾಸನೆಯಂತೆ ಇನ್ನೂ ಮಂಗಳೂರಿನ ಹತ್ತಿರ ಇರುವ ಎಂ.ಆರ್.ಪಿ.ಎಲ್. ಸಂಸ್ಥೆಯಿಂದ ಕಾನೂನು ಪ್ರಕಾರ ಬಾಕಿ ಇರುವ ಬೆಟರ್ ಮೆಂಟ್ ಲೇವಿ ಹಾಗೂ ವಾಟರ್ ಆಗ್ಮೆಂಟೇಶ್ ದರ ರೂಪಾಯಿ ಹದಿನೆಂಟು ಕೋಟಿ ಹದಿನಾರು ಲಕ್ಷರೂ.ಗಳು ವಸೂಲು ಮಾಡದೇ ಇರುವುದರಿಂದ ಮಂಗಳೂರು ಮಹಾನಗರಪಾಲಿಕೆಯ ಸಮಗ್ರ ಕುಡಿಯುವ ನೀರಿನ ವ್ಯವಸ್ಥೆಯನ್ನು ಅನುಷ್ಠಾನಕ್ಕೆ ತರಲು ಬಾಕಿ ಹಣ ೧೮ ಕೋಟಿ, ೧೬ ಲಕ್ಷರೂ.ಗಳನ್ನು ತಕ್ಷಣ ವಸೂಲಿ ಮಾಡ ಬೇಕೆಂದು ಈ ಮೂಲಕ ಸರ್ಕಾರದ ಗಮನ ಸೆಳೆಯುತ್ತೇನೆ.

ಶ್ರೀ ವೈಜನಾಥ ಪಾಟೀಲ್:- (ನಗರಾಭಿವೃದ್ಧಿ, ಕಾಡಾ ಮತ್ತು ಹೆಚ್‌ಕೆಡಿಬಿ ಸಚಿವರು) ಮಾನ್ಯ ಅಧ್ಯಕ್ಷರೆ, ಎಂ.ಆರ್.ಪಿ.ಎಲ್. ಸಂಸ್ಥೆಯ ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ಒಟ್ಟು ರೂ: ೧೮.೧೬ ಕೋಟಿಗಳನ್ನು ಈ ಕೆಳಕಂಡ ಅಂಶಗಳಿಗೆ ನೀಡಬೇಕಾಗಿರುತ್ತದೆ.

ಅ) ಬೆಟರ್ ಮೆಂಟ್ ಶುಲ್ಕ : ರೂ ೪.೬೧ ಕೋಟಿಗಳು.

ಆ) ಜಲ ಸಂಪನ್ಮೂಲ ಕ್ರೋಡೀಕರಣ ಶುಲ್ಕ : ರೂ. ೧೩.೫೫ ಕೋಟಿಗಳು.

ಕಳೆದ ಅಧಿವೇಶನದಲ್ಲಿ ನಾನು ಎಂ. ಆರ್.ಪಿ.ಎಲ್. ಸಂಸ್ಥೆಯವರಿಂದ ಹಣವನ್ನು ವಸೂಲಿ ಮಾಡುವ ಬಗ್ಗೆ ಆಶ್ವಾಸನೆ ನೀಡಿದ್ದೇನು. ಈ ಮದ್ಯೆ ಎಂ. ಆರ್.ಪಿ.ಎಲ್ ಸಂಸ್ಥೆಯು ರಸ್ತೆ ಹಾಗೂ ನೀರಿನ ಸೌಲಭ್ಯವನ್ನು ಅವರೆ ಮಾಡಿಕೊಳ್ಳುವುದಾಗಿ ತಿಳಿಸುತ್ತಾ ಮಂಗಳೂರಿನ ಕ್ತೂನೂರು ಬಾಳ ಮತ್ತು ರೋಕುರು ಗ್ರಾಮಗಳಲ್ಲಿನ ೧೩.೫೫.೧೩ ಎಕರೆ ಜಮೀನನ್ನು ಕೈಗಾರಿಕಾ ಉದ್ದೇಶಕ್ಕಾಗಿ ಭೂ ಉಪಯೋಗ ಬದಲಾವಣೆ ಮಾಡಲು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನೆ ಕಾಯ್ದೆ ೧೯೬೧ ರ ಕಲಂ೧೪ ರಲ್ಲಿ ಹಾಗೂ ಕರ್ನಾಟಕ ಯೋಜನಾ ಪ್ರಾಧಿಕಾರಗಳ ನಿಯಮಗಳು ೧೯೬೫ರ ನಿಯಮ ೫೭(ಎ) ರ ಪ್ರಕಾರ ಭೂ ಉಪಯೋಗ ಬದಲಾವಣೆ ವಿಧಿಸಲಾಗುವ ಶುಲ್ಕವನ್ನು ಹಾಗೂ ಜಲ ಸಂಪನ್ಮೂಲ ಕ್ರೋಢೀಕರಣ ಶುಲ್ಕನ್ನು ಮನ್ನಾ ಮಾಡಬೇಕೆಂದು ಸರ್ಕಾರಕ್ಕೆ ಮನವಿಯನ್ನು ಸಲ್ಲಿಸಿರುತ್ತಾರೆ.

ಎಂ. ಆರ್.ಪಿ.ಎಲ್. ಸಂಸ್ಥೆಗೆ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯು ಮೇಲಿನ ಜಮೀನನ್ನು ಗುತ್ತಿಗೆ ಕಂ ಮಾರಾಟ ಆಧಾರದ ಮೇಲೆ ನೀಡಿರುತ್ತಾರೆ. ಸದರಿ ಜಮೀನನ್ನು ಗುತ್ತಿಗೆ ಕಂ ಮಾರಾಟ ಆಧಾರದ ಮೇಲೆ ನೀಡಿರುವುದರಿಂದ ಜಮೀನಿನ ಒಡೆತನವು ಕೆಐಎಡಿ ಬಿ ಹೊಂದಿದೆ. ರಾಜ್ಯ ಸರ್ಕಾರವು ಕೈಗಾರಿಕಾ ಅಭಿವೃದ್ಧಿಗಾಗಿ ಬಂಡವಾಳದಾರರನ್ನು ಕೈಗಾರಿಕಾಯನ್ನು ಸ್ಥಾಪಿಸಲು ಉತ್ತೇಜನವನ್ನು ನೀಡುತ್ತಿರುವುದರಿಂದ ಇತ್ತಿಚಿನ ದಿನಗಳಲ್ಲಿ ಬಂಡವಾಳ ಹೂಡಿಕೆಯು ಹೆಚ್ಚುತ್ತಿದೆ. ಕೈಗಾರಿಕಾ ಸ್ಥಾಪನೆಗಾಗಿ ಕೈಗಾರಿಕಾ ಪ್ರದೇಶಕ್ಕಾಗಿ ಜಮೀನು ಒದಗಿಸುವುದು ಮುಖ್ಯವಾಗಿರುವುದರಿಂದ ಕೈಗಾರಿಕಾ ಸ್ಥಾಪಿಸುವವರಿಗೆ ಹೆಚ್ಚು ಶುಲ್ಕವನ್ನು ವಿಧಿಸುವುದು ಕೈಗಾರಿಕಾ ಸ್ಥಾಪನೆಗೆ ಪ್ರೋತ್ಸಾಹವನ್ನು ನೀಡಿದಂತೆ ಆಗುವುದಿಲ್ಲ.